10. ಮುಂದುವರೆದು, ಆ.ಸ.ನೌ–3 ರವರು, ದಿನಾಂಕ: 14/02/2013 ರಂದು ಅಂದಿನ ಉಪನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಗುಲ್ಬರ್ಗಾ ರವರು ಪತ್ರಿಸಿ ಸರ್ವೆ ನಂ.99, 100 ಮತ್ತು 101 ರಲ್ಲಿ ಒಟ್ಟು 80 ಗಣಿಗಾರಿಕೆಗಳಿಗೆ ಕೂಡಲೇ ವಿದ್ಯುತ್ ಸರಬರಾಜು ಮಾಡುವುದನ್ನು ತಡೆಹಿಡಿಯಬೇಕು ಎಂದು ತಿಳಿಸಿದ್ದರು. ಆದರೆ, ಸರಿಯಾಗಿ ಯಾವ ಯಾವ ಗಣಿಗಾರಿಕೆಗಳಿಗೆ ವಿದ್ಯುತ್ ಸರಬರಾಜನ್ನು ತಡೆಹಿಡಿಯಬೇಕು ಎಂದು ಆ ಪತ್ರದಲ್ಲಿ ತಿಳಿಸದೇ ಇದ್ದುದರಿಂದ ತಾನು ಆ 80 ಗಣಿಗಾರಿಕೆಗಳಿಗೆ ಕೂಡಲೇ ವಿದ್ಯುತ್ ಸರಬರಾಜು ಮಾಡುವುದನ್ನು

ತಡೆಹಿಡಿಯಲು ಆಗಿರಲ್ಲಿಲ್ಲ ಎಂದು ತಿಳಿಸಿರುತ್ತಾರೆ. ನಂತರದಲ್ಲಿ ತಾನೇ ಖುದ್ದು ಸಂಬಂಧಪಟ್ಟ ಅನಧಿಕೃತ ಗಣಿಗಾರಿಕೆಗಳ ವಿವರಗಳನ್ನು ಪಡೆದು ನೋಟಿಸನ್ನು ಕಳುಹಿಸಿ ಅವರು ಪಡೆದಿರುವಂತಹ ಎನ್.ಓ.ಸಿಯನ್ನು ಹಾಜರುಪಡಿಸಲು ಕೇಳಿದ್ದೆ. ಈ ನಡುವೆ ಉಪನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಗುಲ್ಬರ್ಗಾ ರವರು ದಿನಾಂಕ: 16/12/2013 ರಂದು ತನ್ನನ್ನು ಖುದ್ದು ಮಿರಿಯಾಣ ಗ್ರಾಮದ ಗಣಿಗಾರಿಕೆಯ ಪ್ರದೇಶಕ್ಕೆ ಕರೆದುಕೊಂಡು ಹೋಗಿ ಅಲ್ಲಿದಂತಹ 6 ಗಣಿಗಾರಿಕೆಗಳಿಗೆ ವಿದ್ಯುತ್ ಸರಬರಾಜನ್ನು ತಡೆಹಿಡಿಯಬೇಕೆಂದು ನಿರ್ದೇಶಿಸಿದ್ದರು. ಆದರೆ, ಪುನಃ ದಿನಾಂಕ: 31/01/2014 ರಂದು ಸದರಿಯವರು ತನಗೆ ದೂರವಾಣಿ ಮೂಲಕ ಮೇಲೆ ಹೇಳಿದ 6 ಗಣಿಗಾರಿಕೆಗಳಿಗೆ ಪುನಃ ವಿದ್ಯುತ್ ಸರಬರಾಜು ಮಾಡಬೇಕೆಂದು ನಿರ್ದೇಶಿಸಿದ್ದರು. ಅದರಂತೆ ತಾನು ವಿದ್ಯುತ್ ಸರಬರಾಜನ್ನು ನೀಡಿರುತ್ತೇನೆ. ಸದರಿ ಗ್ರಾಮದ ಸರ್ವೆ ನಂ.99, 100 ಮತ್ತು 101 ರಲ್ಲಿ ಇರುವಂತಹ ಗಣಿಗಾರಿಕೆಗಳಲ್ಲಿ ಯಾವ ಗಣಿಗಾರಿಕೆಗಳಿಗೆ ವಿದ್ಯುತ್ ಸರಬರಾಜನ್ನು ತಡೆಹಿಡಿಯಬೇಕು ಎನ್ನುವ ಬಗ್ಗೆ ಕಂದಾಯ ಇಲಾಖೆಯಿಂದ ಸೂಕ್ತ ದಾಖಲಾತಿಗಳನ್ನು ಒದಗಿಸಿದಲ್ಲಿ ಮಾತ್ರವೇ ವಿದ್ಯುತ್ ಸರಬರಾಜನ್ನು ತಡೆಹಿಡಿಯಬಹುದಾಗಿರುತ್ತದೆ. ಇಲ್ಲವಾದಲ್ಲಿ ಸಾಧ್ಯವಾಗುವುದಿಲ್ಲ ಎಂದು ತಿಳಿಸಿ, ತಾನು ಯಾವುದೇ ರೀತಿಯ ಕರ್ತವ್ಯ ಲೋಪ, ಕರ್ತವ್ಯ ಚ್ಯುತಿ ಎಸಗಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಪ್ರಕರಣಕ್ಕೆ ಸಂಬಂಧಪಟ್ಟ ಕೆಲವೊಂದು ದಾಖಲಾತಿಗಳನ್ನು ಹಾಜರುಪಡಿಸಿರುತ್ತಾರೆ.

11. ಈ ವಿಚಾರಣೆಯಲ್ಲಿ, ಆ.ಸ.ನೌ 1 ರಿಂದ 3 ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಮಂಡನಾಧಿಕಾರಿಗಳು ತಮ್ಮ ಪರವಾಗಿ ದೂರುದಾರರನ್ನು **ಪಿ.ಡಬ್ಲ್ಯು.1** ಎಂದು ಸಾಕ್ಷ್ಯ ನುಡಿಸಿಕೊಂಡು, ನಿ.ಪಿ.1 ರಿಂದ 8 ರವರೆಗಿನ ದಾಖಲೆಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ.

12. ತದನಂತರ, ಆ.ಸ.ನೌ 1 ರಿಂದ 3 ರವರ ದ್ವಿತೀಯ ಮೌಖಿಕ ಹೇಳಿಕೆಯನ್ನು ಪಡೆದುಕೊಳ್ಳಲಾಗಿರುತ್ತದೆ.

13. ಆ.ಸ.ನೌ 1 ರಿಂದ 3 ರವರು ತಮ್ಮನ್ನು ತಾವೇ **ಡಿ.ಡಬ್ಲ್ಯು.1 ರಿಂದ 3** ಎಂದು ಮೌಖಿಕ ಸಾಕ್ಷ್ಯ ನುಡಿದಿದ್ದು, ನಿ.ಡಿ.1 ರಿಂದ 58 ರವರೆಗಿನ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ.

14. ಉಭಯ ಪಕ್ಷದವರ ಪರವಾಗಿ ವಾದ ವಿವಾದವನ್ನು ಮತ್ತು ಆ.ಸ.ನೌ 1 ರಿಂದ 3 ರವರ ಪರ ಸಲ್ಲಿಸಿರುವ ಲಿಖಿತ ವಾದವನ್ನು ಪರಿಶೀಲಿಸಲಾಯಿತು.

15. ಈ ಕೆಳಕಂಡ ಅಂಶವು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತವೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌ 1 ರಿಂದ 3 ರವರ ಮೇಲೆ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಿದೆಯೇ?

**ಅಂಶ–2:** ಆದೇಶವೇನು?

16. ವಾದ ವಿವಾದದ ನಂತರ ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

17. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿವೆ.

**ಅಂಶ 1: ಸಕಾರಾತ್ಮಕವಾಗಿ.**

**ಅಂಶ 2: ಅಂತಿಮ ಆದೇಶದಂತೆ.**

## ಕಾರಣಗಳು

18. ಈ ಪ್ರಕರಣದಲ್ಲಿ ಆ.ಸ.ನೌ 1 ರಿಂದ 3 ರವರ ವಿರುದ್ಧ ಆರೋಪಿಸಲಾದ ಆರೋಪಗಳನ್ನು ರುಜುವಾತುಪಡಿಸಲು ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ದೂರುದಾರರಾದ ಶ್ರೀ. ಶಿವಕುಮಾರ್ ಕೊಳ್ಳೂರ್, ಸಮಾಜ ಸೇವಕರು, ವಿದ್ಯಾನಗರ ಕಾಲೋನಿ, ಚಂದಾಪುರ,

ಚಿಂಚೋಳಿ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ ರವರನ್ನು ಪಿ.ಡಬ್ಲ್ಯು.1 ಎಂದು ಸಾಕ್ಷ್ಯ ನುಡಿಸಿಕೊಂಡು, ನಿ.ಪಿ.1 ರಿಂದ 8 ರವರೆಗಿನ ದಾಖಲೆಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ. ನಿ.ಪಿ–1, ದೂರುದಾರರು ಸಲ್ಲಿಸಿರುವ ದೂರು, ನಿ.ಪಿ–2 ಮತ್ತು 3 ಕ್ರಮವಾಗಿ ಪ್ರಪತ್ರ 1 ಮತ್ತು 2 ಆಗಿರುತ್ತವೆ, ನಿ.ಪಿ–4 ದೂರುದಾರರು ದೂರಿನೊಂದಿಗೆ ಸಲ್ಲಿಸಿದ ದಾಖಲೆಗಳಾಗಿರುತ್ತವೆ. ಉಳಿದ ದಾಖಲಾತಿಗಳನ್ನು ನಿ.ಪಿ–5 ಎಂತಲೂ, 19 ಹಾಳೆಗಳಲ್ಲಿರುವ ಛಾಯಾಚಿತ್ರಗಳನ್ನು ಒಟ್ಟಾಗಿ ನಿ.ಪಿ–6 ಎಂತಲೂ, ದೂರುದಾರ ನೀಡಿದ ಪ್ರತ್ಯುತ್ತರವನ್ನು ನಿ.ಪಿ–7 ಎಂತಲೂ ಗುರುತುಪಡಿಸಿಕೊಳ್ಳಲಾಗಿದೆ. ಪ್ರತ್ಯುತ್ತರದೊಂದಿಗೆ ನೀಡಿದ ದಾಖಲೆಗಳನ್ನು (ಪಹಣಿ ಪತ್ರಿಕೆಗಳು) ನಿ.ಪಿ–8 ಎಂದು ಗುರುತುಪಡಿಸಿಕೊಳ್ಳಲಾಗಿದೆ.

19. ದೂರುದಾರರು ಪ್ರಸ್ತುತ ದೂರನ್ನು ಈ ಸಂಸ್ಥೆಗೆ ದಿನಾಂಕ: 21/06/2014 ರಂದು ನೀಡಿರುತ್ತಾರೆ. ಅವರು ತಮ್ಮ ಮುಖ್ಯ ವಿಚಾರಣೆಯಲ್ಲಿ "ಆ.ಸ.ನೌರರ ಪರಿಚಯ ನನಗೆ ಇದೆ. ಚಿಂಚೋಳಿ ತಾಲ್ಲೂಕು, ಮಿರಿಯಾಣ ಗ್ರಾಮದಲ್ಲಿ ಅಕ್ರಮ ಗಣಿಗಾರಿಕೆಯನ್ನು 5 ವರ್ಷಗಳಿಂದ ಮಾಡುತ್ತಿದ್ದರು. ಅಕ್ರಮ ಗಣಿಗಾರಿಕೆ ತಡೆಯುವ ಬಗ್ಗೆ 1ನೇ ಆ.ಸ.ನೌರರಿಗೆ ನಾನು 2014 ರಲ್ಲಿ ದೂರು ಕೊಟ್ಟೆ. ಸರ್ಕಾರದಿಂದ ಕೆಲವು ಜನರು ಪರವಾನಿಗೆ ಪಡೆಯದೆ ಗಣಿಗಾರಿಕೆಯನ್ನು ಮಾಡುತ್ತಿದ್ದರು. ಆ ಬಗ್ಗೆ ನಾನು ಮಾಹಿತಿ ಹಕ್ಕಿನಡಿ ಅಗತ್ಯ ದಾಖಲೆಗಳನ್ನು 1ನೇ ಆ.ಸ.ನೌ.ರರಿಂದ, ಜೆಸ್ಕಾಂ ಅಧಿಕಾರಿಗಳಿಂದ ಹಾಗೂ ತಹಶೀಲ್ದಾರರಿಂದ ಪಡೆದೆ. ತಹಶೀಲ್ದಾರರು 31 ಜನರಿಗೆ ಗಣಿಗಾರಿಕೆ ನಡೆಸಲು ಎನ್.ಓ.ಸಿ ನೀಡಿದ್ದಾಗಿ ಮಾಹಿತಿ ಕೊಟ್ಟಿದ್ದಾರೆ. ಜೆಸ್ಕಾಂ ನವರು 98 ಜನರಿಗೆ ಗಣಿಗಾರಿಕೆ ಮಾಡುವ ಬಗ್ಗೆ ವಿದ್ಯುತ್ ಸಂಪರ್ಕ ನೀಡಿರುವುದಾಗಿ ಮಾಹಿತಿ ಕೊಟ್ಟಿದ್ದಾರೆ. 31 ಜನರನ್ನು ಹೊರತು ಪಡಿಸಿ ಉಳಿದವರಿಗೆ ಎನ್.ಓ.ಸಿ ಇರಲಿಲ್ಲ. ಉಳಿದ ಜನರು ಅಕ್ರಮ ಗಣಿಗಾರಿಕೆ ಮಾಡುತ್ತಿದ್ದು ಅದನ್ನು ನಿಲ್ಲಿಸಲು ಆ.ಸ.ನೌ.ರವರು ಕ್ರಮ ತೆಗೆದುಕೊಂಡಿಲ್ಲ. ನಂತರ ನಾನು ಈ ಸಂಸ್ಥೆಗೆ ದೂರು ಕೊಟ್ಟೆ" ಎಂದು ನುಡಿದಿರುತ್ತಾರೆ.

20. ದೂರುದಾರರು ತಮ್ಮ ಪಾಟಿ ಸವಾಲಿನಲ್ಲಿ 'ಮಿರಿಯಾಣ ಗ್ರಾಮದಲ್ಲಿ ಕಳೆದ 10–12 ವರ್ಷಗಳಿಂದ ಗಣಿಗಾರಿಕೆ ಮಾಡುತ್ತಿದ್ದ ಬಗ್ಗೆ ನೋಡಿದ್ದೇನೆ' ಎಂದು ಒಪ್ಪಿರುತ್ತಾರೆ. ಆದರೆ,

ಮುಂದುವರೆದು 'ಈ ಅಕ್ರಮ ಗಣಿಗಾರಿಕೆಯ ಬಗ್ಗೆ 2014ರಲ್ಲಿ 1ನೇ ಆ.ಸ.ನೌರವರಿಗೂ ಮತ್ತು ಜಿಲ್ಲಾಧಿಕಾರಿಗಳಿಗೂ ದೂರು ಕೊಟ್ಟಿರುತ್ತೇನೆ. ಆದರೆ, ಸದರಿಯವರು ಯಾವುದೇ ಕ್ರಮ ಕೈಗೊಳ್ಳದೇ ಇದುದ್ದರಿಂದ ಈ ಸಂಸ್ಥೆಗೆ ದೂರು ಕೊಟ್ಟಿರುತ್ತೇನೆ' ಎಂದು ನುಡಿದಿದ್ದಾರೆ.

21. ನಿ.ಪಿ.1 ದೂರನ್ನು ನೋಡಲಾಗಿ, ದೂರುದಾರರು ಆರ್.ಟಿ.ಐ ರ ಅಡಿಯಲ್ಲಿ ದಾಖಲಾತಿಗಳನ್ನು ಕೋರಿ ಅರ್ಜಿ ಸಲ್ಲಿಸಿದಾಗ ತಹಶೀಲ್ದಾರರು, 31 ಜನರಿಗೆ ಮಾತ್ರ ಗಣಿಗಾರಿಕೆ ನಡೆಸಲು ಎನ್.ಓ.ಸಿ ನೀಡಿದ್ದು, 3ನೇ ಎದುರುದಾರರು 98 ಜನರಿಗೆ ಗಣಿಗಾರಿಕೆ ಮಾಡುವ ಬಗ್ಗೆ ವಿದ್ಯುತ್ ಸಂಪರ್ಕ ನೀಡಿರುವುದಾಗಿ ಮಾಹಿತಿ ನೀಡಿರುತ್ತಾರೆ. ಅಂದರೆ, 67 ಜನರು ಅಕ್ರಮವಾಗಿ ಪರವಾನಗಿ ಇಲ್ಲದೇ ಗಣಿಗಾರಿಕೆ ನಡೆಸುತ್ತಿದ್ದಾರೆ ಎನ್ನುವುದಾಗಿದೆ. ಈ ಬಗ್ಗೆ ದೂರುದಾರರು ತಾನು ಆರ್.ಟಿ.ಐ ಕಾಯ್ದೆಯ ಅಡಿಯಲ್ಲಿ ಪಡೆದಂತಹ ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನೋಡಲಾಗಿ, ನಿ.ಪಿ.5ರಲ್ಲಿ 'statement showing the running quarry installation existing in Miriyana' ಎಂದಿದ್ದು, ಅದರಂತೆ ಒಟ್ಟು 98 ಗಣಿಗಾರಿಕೆಗಳು ಅಸ್ತಿತ್ವದಲ್ಲಿರುವ ಬಗ್ಗೆ ಕಂಡುಬರುತ್ತದೆ, ಈ ಬಗ್ಗೆ ಛಾಯಾಚಿತ್ರಗಳನ್ನು (photographs) ಸಹ ಹಾಜರುಪಡಿಸಿರುತ್ತಾರೆ. ಆದರೆ, ಆ.ಸ.ನೌ–2 ತಹಶೀಲ್ದಾರ್, ಚಿಂಚೋಳಿ ರವರು ದಿನಾಂಕ: 02/01/2013 ರಂದು ದೂರುದಾರರಿಗೆ ನೀಡಿರುವ ಹಿಂಬರಹದ ಮಾಹಿತಿಯನ್ನು ನೋಡಲಾಗಿ, ಸದರಿ ಕಾರ್ಯಾಲಯದಿಂದ ಮಿರಿಯಾಣ ಗ್ರಾಮದಲ್ಲಿ ಕಲ್ಲು ಗಣಿಗಾರಿಕೆ ಮಾಡಲು 31 ಜನರಿಗೆ ಮಾತ್ರವೇ ನೀರಾಪೇಕ್ಷಣಾ ಪತ್ರ (ಎನ್.ಓ.ಸಿ)ವನ್ನು ನೀಡಲಾಗಿರುತ್ತದೆ. ಹಾಗಿದ್ದಲ್ಲಿ, ಉಳಿದ 67 ಗಣಿಗಾರಿಕೆಗಳು ಅಕ್ರಮವಾಗಿ ನಡೆಯುತ್ತಿವೆ ಎಂದಾಗುತ್ತದೆ. ಈ ಬಗ್ಗೆ ಅಂದಿನ ತಹಶೀಲ್ದಾರರಾಗಿದ್ದ ಆ.ಸ.ನೌ–2 ರವರು ತಮ್ಮ ಪಾಟಿಸವಾಲಿನಲ್ಲಿ "ಗಣಿಗಾರಿಕೆ ನಡೆಯುವುದು ಪಟ್ಟಾಜಮೀನಿ(ರೆವಿನ್ಯೂ ಲ್ಯಾಂಡ್)ನಲ್ಲೇ ಎನ್ನುವುದು ಸರಿ. ರೆವಿನ್ಯೂ ಲ್ಯಾಂಡ್ ಬಗ್ಗೆ ತಹಶೀಲ್ದಾರರೇ ಜವಾಬ್ದಾರರಾಗಿರುತ್ತಾರೆ ಎನ್ನುವುದು ಸರಿ. ಗಣಿಗಾರಿಕೆ ಪರವಾನಿಗೆಯನ್ನು ತಹಶೀಲ್ದಾರರ ಅನುಮೋದನೆಯನ್ನು ಪಡೆದ ನಂತರವೇ ನೀಡಲಾಗುತ್ತದೆ ಎನ್ನುವುದು ಸರಿ. ನನ್ನ ಅವಧಿಯಲ್ಲಿ ನಾನು ಎನ್‌ಓಸಿ ಕೊಟ್ಟಿರುವುದಿಲ್ಲ. ನಮ್ಮ ಕಚೇರಿಯಿಂದ ಹಿಂದಿನ ತಹಶೀಲ್ದಾರರವರು ಒಟ್ಟು 31 ಎನ್‌ಓಸಿಗಳನ್ನು ನೀಡಿರುತ್ತಾರೆ. 31 ಎನ್‌ಓಸಿಗಳನ್ನು ನೀಡಿದ್ದು,

ಅವುಗಳಲ್ಲಿ ಎಷ್ಟರಲ್ಲಿ ಗಣಿಗಾರಿಕೆ ನಡೆಯುತ್ತಿದೆ ಎಂದು ನೋಡುವುದು ನನ್ನ ಜವಾಬ್ದಾರಿ ಎನ್ನುವುದು ಸರಿ. ನನ್ನ ಅವಧಿಯಲ್ಲಿ 5, 6 ಬಾರಿ ಸ್ಥಳ ಪರಿಶೀಲಿಸಿ ಒಟ್ಟು 6 ಅಕ್ರಮ ಗಣಿಗಾರಿಕೆಗಳು ಎಂದು ದೂರನ್ನು ನೀಡಿರುತ್ತೇನೆ" ಎಂದು ನುಡಿದಿರುತ್ತಾರೆ. ಆದರೆ, 1ನೇ ಆ.ಸ.ನೌರವರಾದ ಅಂದಿನ ಉಪ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ರವರು ತಮ್ಮ ಪಾಟಿಸವಾಲಿನಲ್ಲಿ "98 ಕ್ವಾರಿಗಳು ಅಲ್ಲಿ ಕೆಲಸ ಮಾಡುತ್ತಿದ್ದವು ಎನ್ನುವುದು ಸರಿ. ಅವುಗಳಲ್ಲಿ 31 ಕ್ವಾರಿಗಳು ಅಧಿಕೃತವಾಗಿ ಕೆಲಸ ಮಾಡುತ್ತಿದ್ದು, ಉಳಿದ 67 ಕ್ವಾರಿಗಳು ಅನಧಿಕೃತವಾಗಿ ನಿರ್ವಹಿಸುತ್ತಿದ್ದವು ಎನ್ನುವುದು ಸರಿ. ಸಾಕ್ಷಿ ಮುಂದುವರೆದು ನುಡಿಯುತ್ತಾರೆ ಈ 98 ಕ್ವಾರಿಗಳ ಬಾಬ್ತು ಅರ್ಜಿಗಳು ಬಾಕಿ ಇದ್ದವು ಎಂದು". ಸದರಿಯವರು ಸಹ 31 ಗಣಿಗಾರಿಕೆಗಳು ಮಾತ್ರ ಅಧಿಕೃತವಾಗಿ ಕೆಲಸ ಮಾಡುತ್ತಿದ್ದವು ಮತ್ತು ಉಳಿದ 67 ಗಣಿಗಾರಿಕೆಗಳು ಅನಧಿಕೃತವಾಗಿ ನಿರ್ವಹಿಸುತ್ತಿದ್ದವು ಎನ್ನುವುದನ್ನು ಒಪ್ಪಿರುತ್ತಾರೆ. ಆದರೆ, ಈ 67 ಅನಧಿಕೃತ ಗಣಿಗಾರಿಕೆಗಳ ಬಾಬ್ತು ಆ.ಸ.ನೌ–1 ಮತ್ತು 2 ರವರು ಯಾವುದೇ ರೀತಿಯ ಕ್ರಮ ಕೈಗೊಂಡಿರುವುದಿಲ್ಲ. ಆ.ಸ.ನೌ–1 ರವರು ತಮ್ಮ ಪಾಟಿಸವಾಲಿನಲ್ಲಿ "ಈ ದೂರನ್ನು ಸಲ್ಲಿಸಿದ ನಂತರ ಅನಧಿಕೃತವಾಗಿ ನಡೆಯುತ್ತಿದ್ದ 6 ಕ್ವಾರಿಗಳು ಕೆಲಸ ಮಾಡುವುದನ್ನು ನಿಲ್ಲಿಸಿದ್ದೆ" ಎಂದು ನುಡಿದಿದ್ದರೆ, ಆ.ಸ.ನೌ–2 ತಹಶೀಲ್ದಾರರು ತಮ್ಮ ಪಾಟಿಸವಾಲಿನಲ್ಲಿ "ನನ್ನ ಅವಧಿಯಲ್ಲಿ ಒಟ್ಟು 6 ಅಕ್ರಮ ಗಣಿಗಾರಿಕೆಗಳು ಇವೆ ಎಂದು ದೂರನ್ನು ನೀಡಿರುತ್ತೇನೆ" ಎಂದು ನುಡಿದಿರುತ್ತಾರೆ. ಒಟ್ಟು 67 ಅನಧಿಕೃತ ಗಣಿಗಾರಿಕೆಗಳು ಇವೆ ಎಂದು ಈ ಆ.ಸ.ನೌ–1 ಮತ್ತು 2 ರವರು ಒಪ್ಪಿದ್ದರೂ ಸಹ, ದೂರನ್ನು ನೀಡಿರುವುದು ಕೇವಲ 6 ಅಕ್ರಮ ಗಣಿಗಾರಿಕೆಗಳ ವಿರುದ್ಧ ಮಾತ್ರ (ಈ ಬಗ್ಗೆ ದೂರು ಮತ್ತು ಪ್ರಥಮ ವರ್ತಮಾನ ವರದಿಯ ಪ್ರತಿಗಳನ್ನು ಹಾಜರುಪಡಿಸಿರುತ್ತಾರೆ). ಅಲ್ಲದೇ, ಈ 6 ಅಕ್ರಮ ಗಣಿಗಾರಿಕೆಗಳ ವಿರುದ್ಧ ದೂರನ್ನು ನೀಡಿರುವುದು, ದೂರುದಾರರು ಪ್ರಸ್ತುತ ದೂರನ್ನು ಈ ಸಂಸ್ಥೆಗೆ ಸಲ್ಲಿಸಿದ ನಂತರದಲ್ಲಿ.

22. ಈ ಪ್ರಕರಣದ 3ನೇ ಆ.ಸ.ನೌ ರವರು ಸಹಾಯಕ ಕಾರ್ಯಪಾಲಕ ಇಂಜಿನಿಯರ್. ಸದರಿಯವರು ಗಣಿಗಾರಿಕೆಗೆ ವಿದ್ಯುತ್ ಸರಬರಾಜು ಮಾಡಿದವರಾಗಿರುತ್ತಾರೆ. ಒಟ್ಟು 110 ದಾಖಲಾತಿಗಳನ್ನು ಹಾಜರುಪಡಿಸಿ, ದಿನಾಂಕ: 14/02/2013 ರಂದು ಆ.ಸ.ನೌ–1 ರವರು 80

ಗಣಿಗಾರಿಕೆಗಳು ಮಿರಿಯಾಣ ಗ್ರಾಮದ ಸರ್ವೆ ನಂ.99, 100 ಮತ್ತು 101 ರಲ್ಲಿ ಇದ್ದು, ಅವುಗಳಿಗೆ ವಿದ್ಯುತ್ ಸರಬರಾಜು ಮಾಡುವುದನ್ನು ಕಡಿತಗೊಳಿಸಬೇಕು ಎಂದು ತಿಳಿಸಿದ್ದರು. ಆದರೆ, ಸದರಿ ಗಣಿಗಾರಿಕೆಗಳ ಕುರಿತು ವಿವರವಾದ ಮಾಹಿತಿಯನ್ನು ನೀಡಿರಲಿಲ್ಲ. ಹೀಗಾಗಿ, ತಾನೇ ಖುದ್ದು ವಿವರವನ್ನು ಪಡೆದು ನೋಟಿಸ್ಸನ್ನು ನೀಡಿ ಪರವಾನಗಿಯನ್ನು ನವೀಕರಣ ಮಾಡಿಕೊಳ್ಳಬೇಕೆಂದು ತಿಳಿಸಿದ್ದೆ. ಈ ನಡುವೆ, 1ನೇ ಆ.ಸ.ನೌ ರವರು ತನ್ನನ್ನು ಖುದ್ದು ಗಣಿಗಾರಿಕೆಗಳ ಸ್ಥಳಗಳಿಗೆ ದಿನಾಂಕ: 16/12/2013 ರಂದು ಕರೆದುಕೊಂಡು ಹೋಗಿ, 6 ಗಣಿಗಾರಿಕೆಗಳಿಗೆ ನೀಡಿರುವ ವಿದ್ಯುತ್ ಸರಬರಾಜನ್ನು ಕಡಿತಗೊಳಿಸಬೇಕೆಂದು ಹೇಳಿದರು. ಅದರಂತೆ, ತಾನು ಆ 6 ಗಣಿಗಾರಿಕೆಗಳಿಗೆ ವಿದ್ಯುತ್ ಸರಬರಾಜನ್ನು ಕಡಿತಗೊಳಿಸಿದೆ. ಆದರೆ, ದಿನಾಂಕ: 31/01/2014 ರಂದು ಸದರಿಯವರು ತನಗೆ ದೂರವಾಣಿ ಕರೆ ಮಾಡಿ, ಮೇಲೆ ಹೇಳಿದ 6 ಗಣಿಗಾರಿಕೆಗಳಿಗೆ ಪುನಃ ವಿದ್ಯುತ್ ಸರಬರಾಜನ್ನು ನೀಡಬೇಕು ಎಂದು ನಿರ್ದೇಶನ ನೀಡಿದ್ದರು. ಅದರಂತೆ ತಾನು ವಿದ್ಯುತ್ ಸರಬರಾಜನ್ನು ಪುನಃ ಸದರಿ 6 ಗಣಿಗಾರಿಕೆಗಳಿಗೆ ನೀಡಿರುತ್ತೇನೆ ಎಂದು ತಿಳಿಸಿರುತ್ತಾರೆ.

23. ಈ ಆ.ಸ.ನೌ–3 ರವರು ತಮ್ಮ ಪಾಟಿಸವಾಲಿನಲ್ಲಿ, ಗ್ರಾಮ ಪಂಚಾಯಿತಿ ರವರು ನೀಡಿದ ಎನ್.ಓ.ಸಿ.ಯ ಆಧಾರದ ಮೇಲೆ ತಾನು 98 ಗಣಿಗಾರಿಕೆಗಳಿಗೆ ವಿದ್ಯುತ್ ಸರಬರಾಜನ್ನು ನೀಡಿರುತ್ತೇನೆ ಎಂದು ದಾಖಲಾತಿಗಳನ್ನು ಹಾಜರುಪಡಿಸಿರುತ್ತಾರೆ. ಸದರಿ ದಾಖಲಾತಿಗಳನ್ನು ಪರಿಶೀಲನೆ ಮಾಡಲಾಗಿ, ಅವುಗಳಲ್ಲಿ ಅನುಮತಿ ಸಂಖ್ಯೆ, ಸಂಪರ್ಕ ಆದೇಶ ಸಂಖ್ಯೆ ಮತ್ತು ದಿನಾಂಕ, ಹಿರಿಯ ಸಹಾಯಕ/ಲೆಕ್ಕಾಧಿಕಾರಿಯವರ ಸಹಿ ಇರುವುದಿಲ್ಲ. ವಿದ್ಯುತ್ ಸರಬರಾಜಿಗಾಗಿ ಕೋರಿದ ಅರ್ಜಿಯಲ್ಲಿ ಅರ್ಜಿದಾರನ ಸಹಿಯೇ ಇರುವುದಿಲ್ಲ, ಅರ್ಜಿದಾರನ ಸಹಿ, ದಿನಾಂಕ ಇರುವುದಿಲ್ಲ. ಆದರೆ, ಇವುಗಳನ್ನು "Attested" ಎಂದು ಆ.ಸ.ನೌ–3 ರವರು ಸಹಿ ಹಾಕಿರುತ್ತಾರೆ. ಪರವಾನಿಗೆಯ ನವೀಕರಣವನ್ನು 'ಕಾರ್ಯದರ್ಶಿ', ಗ್ರಾಮ ಪಂಚಾಯತಿ, ಮಿರಿಯಾಣ ರವರು ಮಾಡಿರುತ್ತಾರೆ. ಆ.ಸ.ನೌ–3 ರವರು ಹಾಜರುಪಡಿಸಿರುವ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಸದರಿಯವುಗಳನ್ನು ಪ್ರಸ್ತುತ ಪ್ರಕರಣದಲ್ಲಿ ಹಾಜರುಪಡಿಸುವ ಸಲುವಾಗಿಯೇ ತಯಾರಿಸಲಾಗಿದೆ ಎನ್ನುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

24. ಈ ದೂರನ್ನು ದಿನಾಂಕ: 21/06/2014 ರಂದು ಸಲ್ಲಿಸಲಾಗಿದೆ. ನಿ.ಡಿ.2 ದಿನಾಂಕ: 05/02/2013 ರಂದು ಚಿಂಚೋಳಿಯ ತಹಶೀಲ್ದಾರರು ಆ.ಸ.ನೌ–3 ರವರಿಗೆ ಪತ್ರಿಸಿ "ಮಿರಿಯಾಣ ಗ್ರಾಮದ ಸರ್ವೆ ನಂ.99, 100 ಮತ್ತು 101 ರಲ್ಲಿ ಸುಮಾರು ವರ್ಷಗಳಿಂದ ನಡೆಯುತ್ತಿರುವ ಅನಧಿಕೃತ ಗಣಿಗಾರಿಕೆಗಾಗಿ ತಮ್ಮ ಉಪವಿಭಾಗದಿಂದ ವಿದ್ಯುತ್ ಸರಬರಾಜು ಪಡೆಯುತ್ತಿದ್ದು, ಸದರಿ ಅನಧಿಕೃತ ಗಣಿಗಾರಿಕೆಯಿಂದ ಸರ್ಕಾರಕ್ಕೆ ಬರಬೇಕಾದ ರಾಜಧನ ಸ್ವೀಕೃತವಾಗದೇ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟಾಗುತ್ತಿರುವುದರಿಂದ ಸದರಿ ಸರ್ವೆ ನಂಬರ್‌ಗಳಲ್ಲಿ ನಡೆಯುತ್ತಿರುವ ಅನಧಿಕೃತ ಗಣಿಗಾರಿಕೆಗಾಗಿ ಸರಬರಾಜು ಆಗುತ್ತಿರುವ ವಿದ್ಯುತ್ ಸಂಪರ್ಕವನ್ನು ಪರಿಶೀಲಿಸಿ ಈ ಕೂಡಲೇ ನಿಯಮಾನುಸಾರ ಕ್ರಮ ಜರುಗಿಸಲು ಈ ಮೂಲಕ ಕೋರಲಾಗಿದೆ" ಎಂದು ತಿಳಿಸಿರುತ್ತಾರೆ. ಸದರಿ ಪತ್ರಕ್ಕೆ ಆ.ಸ.ನೌ–3 ರವರು ದಿನಾಂಕ: 07/02/2013 (ನಿ.ಡಿ.1) ರಂತೆ ಉತ್ತರಿಸಿ "ತಾವು ಸೂಚಿಸಿರುವ ಸರ್ವೆ ನಂಬರ್‌ಗಳ ಕ್ಷೇತ್ರ ವಿವರ ತೋರಿಸಿದಲ್ಲಿ ನಮಗೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲು ಅನುಕೂಲವಾಗುತ್ತದೆ ಹಾಗೂ ಸದರಿ ವಿಷಯವು ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ಸಂಬಂಧಪಟ್ಟಿದ್ದರಿಂದ ಸದರಿಯವರ ಗಮನಕ್ಕೆ ತಂದು ಕಾನೂನು ಪ್ರಕಾರ ಕ್ರಮ ಕೈಗೊಳ್ಳಲು ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ಸೂಚಿಸುವುದು ಸೂಕ್ತವೆಂದು ತಮ್ಮಲ್ಲಿ ವಿನಂತಿ" ಎಂದು ಉತ್ತರಿಸಿರುತ್ತಾರೆ. ಆ.ಸ.ನೌ–3 ರವರ ಕಛೇರಿಯಿಂದ ವಿದ್ಯುತ್ ಸರಬರಾಜು ಮಾಡಿರುವಾಗ, ರಾಜಧನ ಸ್ವೀಕೃತವಾಗದೇ ಇರುವುದರಿಂದ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿ ಎಂದು ತಹಶೀಲ್ದಾರರು ಆ.ಸ.ನೌ–3 ರವರನ್ನೇ ಕೇಳಬೇಕಾಗಿದ್ದು, ಆದರೆ ಈ ಆ.ಸ.ನೌ–3 ರವರು ಸೂಕ್ತ ಕ್ರಮಕೈಗೊಳ್ಳಲು ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ಸೂಚಿಸಿ ಎಂದು ಉತ್ತರಿಸಿರುತ್ತಾರೆ. ಇದೇ ರೀತಿ ನಿ.ಡಿ.4 ರಂತೆ ಆ.ಸ.ನೌ–3 ರವರು ಉಪ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ದಿನಾಂಕ: 28/02/2013 ರಂದು ಪತ್ರಿಸಿರುತ್ತಾರೆ. ನಿ.ಡಿ.5 ರಂತೆ ದಿನಾಂಕ: 14/02/2013 ರಂದು ಉಪ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಗುಲ್ಬರ್ಗಾ ರವರು ಆ.ಸ.ನೌ–3 ರವರಿಗೆ ಪತ್ರಿಸಿ ಅಧಿಕೃತ ಗುತ್ತಿಗೆದಾರರ ಪಟ್ಟಿಯನ್ನು ಪತ್ರಕ್ಕೆ ಲಗತ್ತಿಸಿ ಕಳುಹಿಸಿದೆ, ಸದರಿ ಪಟ್ಟಿಯಲ್ಲಿರುವ ಗುತ್ತಿಗೆದಾರರನ್ನು ಹೊರತುಪಡಿಸಿ ಅನಧಿಕೃತವಾಗಿ ಗಣಿಗಾರಿಕೆ ಮಾಡಲು ಪಡೆದಿರುವವರ ವಿದ್ಯುತ್ ಸಂಪರ್ಕವನ್ನು ಕೂಡಲೇ ಕಡಿತಗೊಳಿಸಬೇಕಾಗಿ ಕೋರಿರುತ್ತಾರೆ. ಆದರೆ, ಆ.ಸ.ನೌ–3

ರವರು ಆ ಪ್ರಯತ್ನವನ್ನು ಮಾಡಿರುವುದಿಲ್ಲ. ಪುನಃ ದಿನಾಂಕ: 21/11/2013 ರಂದು ಉಪ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಗುಲ್ಬರ್ಗಾ ರವರು ಆ.ಸ.ನೌ–3 ರವರಿಗೆ ಪತ್ರಿಸಿ "ಈ ಪತ್ರದೊಂದಿಗೆ ಲಗತ್ತಿಸಿದ ಕಲ್ಲು ಗಣಿ ಗುತ್ತಿಗೆದಾರರನ್ನು ಹೊರತುಪಡಿಸಿ ಉಳಿದ ಕಲ್ಲು ಗಣಿ ಗುತ್ತಿಗೆ ಜನರು ಈ ಕಛೇರಿಗೆ ಗುತ್ತಿಗೆ ಪರವಾನಿಗೆಗಾಗಿ ಅರ್ಜಿಗಳನ್ನು ಸಲ್ಲಿಸುತ್ತಿದ್ದು, ಸದರಿ ಅರ್ಜಿಗಳು ಕಾರಣಾಂತರಗಳಿಂದ ವಿವಿಧ ಹಂತಗಳಲ್ಲಿ ವಿಲೇವಾರಿಯಾಗದೇ ಉಳಿದ್ದಿದ್ದು, ಸದರಿ ಅರ್ಜಿದಾರರು ಗಣಿಗಾರಿಕೆಯನ್ನು ನಿಯಮಾನುಸಾರ ಮಾಡಲು ಅವಕಾಶ ಇಲ್ಲದ ಕಾರಣ ಸದರಿ ಗಣಿಗಾರಿಕೆಗೆ ನೀಡಿದ ವಿದ್ಯುತ್ ಸಂಪರ್ಕಗಳನ್ನು ಕಡಿತಗೊಳಿಸಲು ತಮ್ಮಲ್ಲಿ ವಿನಂತಿಸಿದೆ. **ಅನಧಿಕೃತ ಗಣಿಗಾರಿಗೆ ತಡೆಯುವಲ್ಲಿ ತಮ್ಮ ಸಹಕಾರ ಅಗತ್ಯ"** ಎಂದು ಕೋರಿರುತ್ತಾರೆ. ಆದರೂ ಸಹ, ಆ.ಸ.ನೌ–3 ರವರು ಯಾವುದೇ ರೀತಿಯ ಕ್ರಮಕೈಗೊಳ್ಳದೇ ಇದ್ದುದರಿಂದ ದಿನಾಂಕ: 16/12/2013 ರಂದು ಆ.ಸ.ನೌ–1 ರವರು ಖುದ್ದು ಹೋಗಿ 6 ಗಣಿಗಳ ವಿದ್ಯುತ್ ಸಂಪರ್ಕ ಕಡಿತಗೊಳಿಸಲು ಸೂಚಿಸಿರುತ್ತಾರೆ. ನಂತರ ದೂರವಾಣಿಯ ಮೂಲಕ ಆ.ಸ.ನೌ–1 ರವರು ಪುನಃ ವಿದ್ಯುತ್ ಸಂಪರ್ಕವನ್ನು ಆ 6 ಗಣಿಗಳಿಗೆ ನೀಡಬೇಕೆಂದು ನಿರ್ದೇಶನ ನೀಡಿದ್ದರಿಂದ, ಆ.ಸ.ನೌ–3 ರವರು ಪುನಃ ವಿದ್ಯುತ್ ಸಂಪರ್ಕವನ್ನು ಆ 6 ಗಣಿಗಳಿಗೆ ನೀಡಿರುತ್ತಾರೆ ಎನ್ನುವುದು ದಿನಾಂಕ: 04/01/2014ರ ಆ.ಸ.ನೌ–3 ರವರ ಪತ್ರದಿಂದ ತಿಳಿದುಬರುತ್ತದೆ.

25. ಇಲ್ಲಿ, **ಮುಖ್ಯವಾಗಿ ಆ.ಸ.ನೌ–3 ರವರು ಅನಧಿಕೃತ ಗಣಿಗಾರಿಕೆಗಳಿಗೆ ವಿದ್ಯುತ್ ಸಂಪರ್ಕವನ್ನು ತಡೆಹಿಡಿಯುವಲ್ಲಿ ವಿಫಲರಾಗಿರುತ್ತಾರೆ ಎನ್ನುವುದು ಸ್ಪಷ್ಟವಾಗಿ ಕಂಡುಬರುತ್ತದೆ.** ಆ.ಸ.ನೌ–1 ಮತ್ತು 2 ರವರು ಈ ಬಗ್ಗೆ ನಿರ್ದೇಶನ ನೀಡಿದ್ದಾಗ್ಯೂ ಸಹ, ಆ.ಸ.ನೌ–3 ರವರು ಸದರಿ ಜವಾಬ್ದಾರಿ ತಮ್ಮದೇ ಆಗಿರುತ್ತದೆ ಎಂದು ಆ.ಸ.ನೌ–1 ಮತ್ತು 2 ರವರಿಗೆ ಪತ್ರ ಮುಖೇನ ತಿಳಿಸಿರುತ್ತಾರೆ. ಆ.ಸ.ನೌ–3 ರವರು ತನ್ನ ಜವಾಬ್ದಾರಿಯಿಂದ ನುಳುಚಿಕೊಳ್ಳುವ ಪ್ರಯತ್ನ ಮಾಡಿ ಆ.ಸ.ನೌ–1 ಮತ್ತು 2 ರವರ ಮೇಲೆ ಸದರಿ ಜವಾಬ್ದಾರಿಯನ್ನು ಹೊರಿಸಲು ಮಾಡಿರುವ ಪ್ರಯತ್ನ ಸ್ಪಷ್ಟವಾಗಿ ದಾಖಲಾತಿಗಳಿಂದ ಕಾಣಬರುತ್ತದೆ. ಆದರೂ ಸಹ, ಆ.ಸ.ನೌ–3 ತನ್ನ ಪಾಟಿಸವಾಲಿನಲ್ಲಿ "ತಾಲ್ಲೂಕಿನ ಗಣಿಗಾರಿಕೆಗಳಿಗೆ ವಿದ್ಯುತ್ ಸಂಪರ್ಕ ನೀಡಲು ಪರವಾನಿಗೆ ನೀಡುವ ಜವಾಬ್ದಾರಿ ನನ್ನದೇ ಆಗಿತ್ತು ಎನ್ನುವುದು ಸರಿ. ನನ್ನ ಕರ್ತವ್ಯದ ಅವಧಿಯಲ್ಲಿ ಒಟ್ಟು 22 ಗಣಿಗಾರಿಕೆಗಳಿಗೆ

ವಿದ್ಯುತ್ ಸಂಪರ್ಕ ನೀಡಿರುತ್ತೇನೆ. ನಮ್ಮ ಕಚೇರಿಯಿಂದ ಒಟ್ಟು 98 ಅಧಿಕೃತ ಗಣಿಗಾರಿಕೆ ಸ್ಥಾವರಗಳಿಗೆ ವಿದ್ಯುತ್ ಸಂಪರ್ಕವನ್ನು ನೀಡಲಾಗಿರುತ್ತದೆ. ತಹಶೀಲ್ದಾರರವರು ಮತ್ತು ತಾಲ್ಲೂಕಿನ ಗಣಿ ಮತ್ತು ಭೂ ವಿಜ್ಞಾನದ ಉಪನಿರ್ದೇಶಕರು ಎನ್‌ಓಸಿಯನ್ನು ನೀಡಿದ ನಂತರವೇ ನಾವು ವಿದ್ಯುತ್ ಸಂಪರ್ಕ ನೀಡಬೇಕು ಎನ್ನುವುದು ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ನಮ್ಮ ಕಾಯ್ದೆ ಕೆಇಆರ್‌ಸಿ ಪ್ರಕಾರ ಸಂಬಂಧಪಟ್ಟ ಗ್ರಾಮಪಂಚಾಯತಿಯವರು ಎನ್‌ಓಸಿ ನೀಡದಲ್ಲಿ ನಾವು ವಿದ್ಯುತ್ ಸಂಪರ್ಕ ನೀಡುತ್ತೇವೆ. 67 ಗಣಿಗಾರಿಕೆಯ ಮಾಲೀಕರೊಂದಿಗೆ ಷರೀಕಾಗಿ ಅಕ್ರಮ ವಿದ್ಯುತ್ ಸಂಪರ್ಕವನ್ನು ನೀಡಿರುತ್ತೇನೆ ಎನ್ನುವುದು ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ 98 ಗಣಿಗಾರಿಕೆಗೆ ವಿದ್ಯುತ್ ಸಂಪರ್ಕ ನೀಡಲು ಗ್ರಾಮ ಪಂಚಾಯತಿಯವರು ನೀಡಿದ ಎನ್‌ಓಸಿಯನ್ನು ಈಗಾಗಲೇ ಹಾಜರುಪಡಿಸಿರುತ್ತೇನೆ. ವಿದ್ಯುತ್ ಸಂಪರ್ಕವನ್ನು ನೀಡಲು ನಾನು ತಹಶೀಲ್ದಾರ ಮತ್ತು ಗಣಿ ಮತ್ತು ಭೂವಿಜ್ಞಾನದ ಉಪನಿರ್ದೇಶಕರವರಿಂದ ಎನ್‌ಓಸಿ ಪಡೆಯಬೇಕಾಗಿತ್ತು ಎನ್ನುವುದು ಸರಿಯಲ್ಲ. ಆ ರೀತಿ ಪಡೆಯದೆ ನಾನು ಕರ್ತವ್ಯಲೋಪ, ಕರ್ತವ್ಯ ಚ್ಯುತಿ ಎಸಗಿರುತ್ತೇನೆ ಎನ್ನುವುದು ಸರಿಯಲ್ಲ" ಎಂದು ನುಡಿದಿರುತ್ತಾರೆ. ಈ ಆ.ಸ.ನೌ–3 ರವರು 98 ಗಣಿಗಾರಿಕೆಗೆ ವಿದ್ಯುತ್ ಸಂಪರ್ಕವನ್ನು ಗ್ರಾಮ ಪಂಚಾಯತಿಯವರು ನೀಡಿದ ಎನ್.ಓ.ಸಿ.ಯ ಮೇಲ್ ನೀಡಿರುತ್ತಾರೆ. ಈಗಾಗಲೇ ಮೇಲೆ ಗಮನಿಸಿದಂತೆ ಈ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳ ನ್ಯೂನ್ಯತೆಗಳ ಬಗ್ಗೆ ವಿವರಿಸಿದ್ದೇನೆ. 31 ಗಣಿಗಾರಿಕೆಗಳು ಮಾತ್ರವೇ ಅಧಿಕೃತ ಗಣಿಗಾರಿಕೆಗಳಾಗಿದ್ದರೂ ಸಹ ಈ ಬಗ್ಗೆ ಆ.ಸ.ನೌ–3 ರವರು ತಮ್ಮ ಪಾಟಿಸವಾಲಿನಲ್ಲಿ "31 ಗಣಿಗಾರಿಕೆಗಳಿಗೆ ವಿದ್ಯುತ್ ಸಂಪರ್ಕವನ್ನು ನೀಡುವಾಗ ಸಂಬಂಧಪಟ್ಟ ತಹಶೀಲ್ದಾರ್ ಹಾಗೂ ಗಣಿ ಮತ್ತು ಭೂ ವಿಜ್ಞಾನದ ಉಪನಿರ್ದೇಶಕರು ರವರಿಂದ ಎನ್‌ಓಸಿಯನ್ನು ಪಡೆದಿರುವ ಬಾಬ್ತು ನಮ್ಮ ಇಲಾಖೆಗೆ ಮಾಹಿತಿ ಇರುವುದಿಲ್ಲ. ಈ ಬಗ್ಗೆ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ" ಎಂದು ಉತ್ತಿರಿಸಿದ್ದು, 31 ಗಣಿಗಾರಿಕೆಗಳ ಎನ್.ಓ.ಸಿ.ಯ ಬಾಬ್ತು ತಮ್ಮ ಇಲಾಖೆಗೆ ಮಾಹಿತಿಯೇ ಇರುವುದಿಲ್ಲ ಎಂದಿರುವುದು ಈತನ ಬೇಜವಾಬ್ದಾರಿತನವನ್ನು ಎತ್ತಿ ತೋರಿಸುತ್ತದೆ.

26. ಈ ಆ.ಸ.ನೌ–1, 2 ಮತ್ತು 3 ರವರು 98 ಕಲ್ಲು ಗಣಿಗಾರಿಕೆಗಳಿಗೆ ವಿದ್ಯುತ್ ಸಂಪರ್ಕವನ್ನು ನೀಡಿರುವುದಾಗಿ ಒಪ್ಪಿರುತ್ತಾರೆ. ಆ.ಸ.ನೌ–1 ಮತ್ತು 2 ರವರು ಕೇವಲ 31 ಗಣಿಗಾರಿಕೆಗಳು ಮಾತ್ರವೇ ಅಧಿಕೃತ ಗಣಿಗಾರಿಕೆಗಳಾಗಿರುತ್ತವೆ ಎಂದು ಒಪ್ಪಿ, ಅವುಗಳ ಪಟ್ಟಿಯನ್ನು ಹಾಜರುಪಡಿಸಿರುತ್ತಾರೆ. ಉಳಿದ 68 ಗಣಿಗಾರಿಕೆಗಳಿಗೆ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಬೇಕೆಂದು ಆ.ಸ.ನೌ–3 ರವರಿಗೆ ನಿರ್ದೇಶನ ನೀಡಿದ್ದರೂ ಸಹ ಅವರು ಕಡಿತಗೊಳಿಸಿರುವುದಿಲ್ಲ. ಈ ದೂರನ್ನು ಈ ಸಂಸ್ಥೆಗೆ ಸಲ್ಲಿಸಿದ ನಂತರ ಆ.ಸ.ನೌ–1 ಮತ್ತು 2 ರವರು ಕೇವಲ 6 ಗಣಿಗಾರಿಕೆಗಳು ಅನಧಿಕೃತ ಎಂದು ದೂರನ್ನು ಪೋಲಿಸ್ ಠಾಣೆಗೆ ಸಲ್ಲಿಸಿರುತ್ತಾರೆ. ಈ ಎಲ್ಲವುಗಳನ್ನು ಗಮನಿಸಲಾಗಿ ಆ.ಸ.ನೌ–1 ರಿಂದ 3 ರವರು ಅಕ್ರಮ ಗಣಿಗಾರಿಕೆಯನ್ನು ತಡೆಯುವಲ್ಲಿ ವಿಫಲರಾಗಿರುತ್ತಾರೆ ಎಂದು ಸ್ಪಷ್ಟವಾಗಿ ಕಂಡುಬರುತ್ತದೆ. ಅಲ್ಲದೇ, ಈ ಮೂವರು ಆ.ಸ.ನೌ ರವರು ಜವಾಬ್ದಾರಿಯನ್ನು ಇತರರ ಮೇಲೆ ಹೊರಿಸಲು ಪ್ರಯತ್ನ ಪಟ್ಟಿರುವುದು ದಾಖಲಾತಿಗಳಿಂದ ಕಂಡುಬರುತ್ತದೆ. ದೂರಿನಲ್ಲಿ 'ಅನೇಕ ವರ್ಷಗಳಿಂದ' ಅಕ್ರಮ ಗಣಿಗಾರಿಕೆ ನಡೆಯುತ್ತಿದೆ ಎಂದು ತಿಳಿಸಿದ್ದರೂ ಸಹ, ದೂರನ್ನು ಸಲ್ಲಿಸಿದ ನಂತರದಲ್ಲಿಯೂ ಸಹ ಈ ಆ.ಸ.ನೌ–1 ರಿಂದ 3 ರವರು ಅಕ್ರಮ ಗಣಿಗಾರಿಕೆಯನ್ನು ತಡೆಯುವಲ್ಲಿ ವಿಫಲರಾಗಿರುತ್ತಾರೆ. ಕಣ್ಣೊರೆಸುವ ತಂತ್ರವಾಗಿ ಕೇವಲ 6 ಜನರ ವಿರುದ್ಧ ಮಾತ್ರವೇ ಅಕ್ರಮ ಗಣಿಗಾರಿಗೆ ನಡೆಸುತ್ತಿದ್ದಾರೆಂದು ದೂರನ್ನು ಸಲ್ಲಿಸುವ ನಾಟಕವಾಡಿರುತ್ತಾರೆ.

27. **ಈ ಮೇಲ್ಕಂಡ ಕಾರಣಗಳು ಮತ್ತು ಚರ್ಚೆಯಿಂದಾಗಿ, ಆ.ಸ.ನೌ 1, 2 ಮತ್ತು 3 ರವರ ವಿರುದ್ಧ ಆಪಾದಿಸಲಾದ ಆರೋಪಗಳನ್ನು ವಿಚಾರಣಾ ಪ್ರಾಧಿಕಾರವು ರುಜುವಾತುಪಡಿಸಿರುತ್ತದೆ ಎನ್ನುವ ನಿರ್ಣಯಕ್ಕೆ ಬಂದ ಅಂಶ–1ನ್ನು ಸಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.**

28. **ಅಂಶ–2: ಈ ಮೇಲ್ಕಂಡ ಕಾರಣಗಳಿಗಾಗಿ, ಈ ಕೆಳಕಂಡಂತೆ ಆದೇಶಿಸಲಾಗಿದೆ.**

## ಆದೇಶ

ಶಿಸ್ತು ಪ್ರಾಧಿಕಾರದವರು ಆಪಾದಿತ ಆ.ಸ.ನೌ – (1) ಶ್ರೀ. ಪಿ. **ಪದ್ಮನಾಭಚಾರ್,** ಹಿಂದಿನ ಉಪ ನಿರ್ದೇಶಕರು (ಪ್ರಭಾರ), ಗಣಿ ಮತ್ತು ಭೂವಿಜ್ಞಾನ ಇಲಾಖೆ, ಗುಲ್ಬರ್ಗಾ (2) ಶ್ರೀ. **ಯಲ್ಲಪ್ಪ ಸುಬೇದಾರ್,** ಹಿಂದಿನ ತಹಶೀಲ್ದಾರ್, ಚಿಂಚೋಳಿ ತಾಲ್ಲೂಕು, ತಹಶೀಲ್ದಾರ್ ಗ್ರೇಡ್-1, ಜೇವರ್ಗಿ ತಾಲ್ಲೂಕು, ಕಲಬುರ್ಗಿ ಜಿಲ್ಲೆ, ಮತ್ತು (3) ಶ್ರೀ. **ಪರಮೇಶ್ವರ್ ಬಾಬುರಾವ್,** ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಜೆಸ್ಕಾಂ ಓ & ಎಂ ಉಪ-ವಿಭಾಗ, ಚಿಂಚೋಳಿ ತಾಲ್ಲೂಕು, ಗುಲ್ಬರ್ಗಾ ಇವರುಗಳ ವಿರುದ್ಧ ಆಪಾದಿಸಲಾದ ಆರೋಪಗಳನ್ನು ಶಿಸ್ತುಪ್ರಾಧಿಕಾರವು ಸೂಕ್ತ ಸಾಕ್ಷ್ಯಧಾರಗಳನ್ನು ನೀಡಿ ರುಜುವಾತುಪಡಿಸಿರುತ್ತದೆ.

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

8.1.21

**(ಕೆ.ಭಾಗ್ಯ)**
ಅಪರ ನಿಬಂಧಕರು ವಿಚಾರಣೆಗಳು-14,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

## ANNEXURES

| Sl. No. | Particulars of Documents | |
|---|---|---|
| 1 | **Witness examined on behalf of the Disciplinary Authority** | |
| | **PW-1** | Sri. Shivakumar Kollur, Social Worker, R/o Vidhyanagar Colony, Chandapur, Chincholi Taluk, Gulbarga District. |
| 2 | **Documents marked on behalf of the Disciplinary Authority Ex.P-1 to Ex.P-8** | |
| | **Ex.P.1 & 1(a)** | Form No.1 with Signature. |
| | **Ex.P.2 & 2(a)** | Form No.2 with Signature (Affidavit). |
| | **Ex.P.3 & 3(a)** | Complaint given to this institution with Signature dtd: 03/07/2015. |
| | **Ex.P.4** | Documents pertaining to Ex.P.3/RTCs. |
| | **Ex.P.5** | Statement Showing the demand collection and balance of revenue in respect of current quarry lease blocks for 2010-11 & other documents. |
| | **Ex.P.6** | Photographs. |
| | **Ex.P.7 & 7(a)** | Rejoinder submitted to this institution with Signature along with documents dtd: 27/10/2014. |
| | **Ex.P.8** | Documents pertaining to Ex.P.7/RTCs. |
| 3 | **Witness examined on behalf of the DGO, Documents marked on behalf of the DGO** | |
| | **DW-1** | Sri. Parameshwar Babu Rao, Assistant Executive Engineer (E), GESCOM, Chincholi, Kalburgi. |

| | | |
|---|---|---|
| | **DW-2** | Sri. Padmanabhachar, the then incharge Deputy Director, Mines & Geology Department, Gulbarga. |
| **4** | **Documents marked on behalf of the DGOs through the complainant** | |
| | **Ex.D.1** | Letter dtd: 07/02/2013 addressed to Tahasildar, Chincholi Taluk, Gulbarga. |
| | **Ex.D.2** | Letter dtd: 05/02/2013 addressed by Tahasildar, Chincholi. |
| | **Ex.D.3** | Letter dtd: 04/02/2013 addressed to DC, Gulbarga. |
| | **Ex.D.4** | Letter dtd: 28/02/2013 addressed to DD, Mines & Geology Dept., Gulbarga. |
| | **Ex.D.5 & 5(a)** | Letter dtd: 14/02/2013 addressed by DD, Mines & Geology Dept., Gulbarga with enclosure. |
| | **Ex.D.6** | Letter dtd: 04/01/2014 addressed to DD, Mines & Geology Dept., Gulbarga (Certified) |
| | **Ex.D.7** | Letter dtd: 21/11/2013 addressed by DD, Mines & Geology Dept., Gulbarga with enclosure. |
| | **Ex.D.8** | Agreement copy with K.E.R.C Conditions. |
| | **Ex.D.9** | Request Form of Electricity Supply with enclosures. |
| | **Ex.D.10** | Request Form of Electricity Supply with enclosures. |
| | **Ex.D.11** | Request Form of Electricity Supply with enclosures. |
| | **Ex.D.12** | Request Form of Electricity Supply with enclosures. |
| | **Ex.D.13** | Request Form of Electricity Supply with enclosures. |

| | | |
|---|---|---|
| | **Ex.D.14** | Request Form of Electricity Supply with enclosures. |
| | **Ex.D.15** | Request Form of Electricity Supply with enclosures. |
| | **Ex.D.16** | Request Form of Electricity Supply with enclosures. |
| | **Ex.D.17** | Request Form of Electricity Supply with enclosures. |
| | **Ex.D.18** | Request Form of Electricity Supply with enclosures. |
| | **Ex.D.19** | Request Form of Electricity Supply with enclosures. |
| | **Ex.D.20** | Request Form of Electricity Supply with enclosures. |
| | **Ex.D.21** | Request Form of Electricity Supply with enclosures. |
| | **Ex.D.22** | Request Form of Electricity Supply with enclosures. |
| | **Ex.D.23** | Request Form of Electricity Supply with enclosures. |
| | **Ex.D.24** | Request Form of Electricity Supply with enclosures. |
| | **Ex.D.25** | Request Form of Electricity Supply with enclosures. |
| | **Ex.D.26** | Request Form of Electricity Supply with enclosures. |
| | **Ex.D.27** | Request Form of Electricity Supply with enclosures. |
| | **Ex.D.28** | Request Form of Electricity Supply with enclosures. |
| | **Ex.D.29** | Request Form of Electricity Supply with enclosures. |
| | **Ex.D.30** | Request Form of Electricity Supply with enclosures. |
| | **Ex.D.31** | Request Form of Electricity Supply with enclosures. |
| | **Ex.D.32** | Request Form of Electricity Supply with enclosures. |

| | | |
|---|---|---|
| | **Ex.D.33** | Request Form of Electricity Supply with enclosures. |
| | **Ex.D.34** | Request Form of Electricity Supply with enclosures. |
| | **Ex.D.35** | Request Form of Electricity Supply with enclosures. |
| | **Ex.D.36** | Request Form of Electricity Supply with enclosures. |
| | **Ex.D.37** | Request Form of Electricity Supply with enclosures. |
| | **Ex.D.38** | Request Form of Electricity Supply with enclosures. |
| | **Ex.D.39** | Request Form of Electricity Supply with enclosures. |
| | **Ex.D.40** | Request Form of Electricity Supply with enclosures. |
| | **Ex.D.41** | Request Form of Electricity Supply with enclosures. |
| | **Ex.D.42** | Request Form of Electricity Supply with enclosures. |
| | **Ex.D.43** | Request Form of Electricity Supply with enclosures. |
| | **Ex.D.44** | Request Form of Electricity Supply with enclosures. |
| | **Ex.D.45** | Request Form of Electricity Supply with enclosures. |
| | **Ex.D.46** | Request Form of Electricity Supply with enclosures. |
| | **Ex.D.47** | Request Form of Electricity Supply with enclosures. |
| | **Ex.D.48** | Request Form of Electricity Supply with enclosures. |
| | **Ex.D.49** | Request Form of Electricity Supply with enclosures. |
| | **Ex.D.50** | Request Form of Electricity Supply with enclosures. |
| | **Ex.D.51** | Request Form of Electricity Supply with enclosures. |

| | | |
|---|---|---|
| | **Ex.D.52** | Request Form of Electricity Supply with enclosures. |
| | **Ex.D.53** | Request Form of Electricity Supply with enclosures. |
| | **Ex.D.54** | Request Form of Electricity Supply with enclosures. |
| | **Ex.D.55** | Request Form of Electricity Supply with enclosures. |
| | **Ex.D.56** | Request Form of Electricity Supply with enclosures. |
| | **Ex.D.57** | Request Form of Electricity Supply with enclosures. |
| | **Ex.D.58** | Request Form of Electricity Supply with enclosures. |
| | **Ex.D.59** | Request Form of Electricity Supply with enclosures. |
| | **Ex.D.60** | Request Form of Electricity Supply with enclosures. |
| | **Ex.D.61** | Request Form of Electricity Supply with enclosures. |
| | **Ex.D.62** | Request Form of Electricity Supply with enclosures. |
| | **Ex.D.63** | Request Form of Electricity Supply with enclosures. |
| | **Ex.D.64** | Request Form of Electricity Supply with enclosures. |
| | **Ex.D.65** | Request Form of Electricity Supply with enclosures. |
| | **Ex.D.66** | Request Form of Electricity Supply with enclosures. |
| | **Ex.D.67** | Request Form of Electricity Supply with enclosures. |
| | **Ex.D.68** | Request Form of Electricity Supply with enclosures. |
| | **Ex.D.69** | Request Form of Electricity Supply with enclosures. |
| | **Ex.D.70** | Request Form of Electricity Supply with enclosures. |

| | | |
|---|---|---|
| | **Ex.D.71** | Request Form of Electricity Supply with enclosures. |
| | **Ex.D.72** | Request Form of Electricity Supply with enclosures. |
| | **Ex.D.73** | Request Form of Electricity Supply with enclosures. |
| | **Ex.D.74** | Request Form of Electricity Supply with enclosures. |
| | **Ex.D.75** | Request Form of Electricity Supply with enclosures. |
| | **Ex.D.76** | Request Form of Electricity Supply with enclosures. |
| | **Ex.D.77** | Request Form of Electricity Supply with enclosures. |
| | **Ex.D.78** | Request Form of Electricity Supply with enclosures. |
| | **Ex.D.79** | Request Form of Electricity Supply with enclosures. |
| | **Ex.D.80** | Request Form of Electricity Supply with enclosures. |
| | **Ex.D.81** | Request Form of Electricity Supply with enclosures. |
| | **Ex.D.82** | Request Form of Electricity Supply with enclosures. |
| | **Ex.D.83** | Request Form of Electricity Supply with enclosures. |
| | **Ex.D.84** | Request Form of Electricity Supply with enclosures. |
| | **Ex.D.85** | Request Form of Electricity Supply with enclosures. |
| | **Ex.D.86** | Request Form of Electricity Supply with enclosures. |
| | **Ex.D.87** | Request Form of Electricity Supply with enclosures. |
| | **Ex.D.88** | Request Form of Electricity Supply with enclosures. |
| | **Ex.D.89** | Request Form of Electricity Supply with enclosures. |

| | | |
|---|---|---|
| | **Ex.D.90** | Request Form of Electricity Supply with enclosures. |
| | **Ex.D.91** | Request Form of Electricity Supply with enclosures. |
| | **Ex.D.92** | Request Form of Electricity Supply with enclosures. |
| | **Ex.D.93** | Request Form of Electricity Supply with enclosures. |
| | **Ex.D.94** | Request Form of Electricity Supply with enclosures. |
| | **Ex.D.95** | Request Form of Electricity Supply with enclosures. |
| | **Ex.D.96** | Request Form of Electricity Supply with enclosures. |
| | **Ex.D.97** | Request Form of Electricity Supply with enclosures. |
| | **Ex.D.98** | Request Form of Electricity Supply with enclosures. |
| | **Ex.D.99** | Request Form of Electricity Supply with enclosures. |
| | **Ex.D.100** | Request Form of Electricity Supply with enclosures (Attested) |
| | **Ex.D.101** | Request Form of Electricity Supply with enclosures. |
| | **Ex.D.102** | Request Form of Electricity Supply with enclosures. |
| | **Ex.D.103** | Request Form of Electricity Supply with enclosures. |
| | **Ex.D.104** | Request Form of Electricity Supply with enclosures. |
| | **Ex.D.105** | Request Form of Electricity Supply with enclosures. |
| | **Ex.D.106** | Statement showing Electricity bill of M/s. Mahindar Kumar So Muralidhar Parthan Stone Quarry. |
| | **Ex.D.107** | RTI application. |

| | | |
|---|---|---|
| | **Ex.D.108** | RTI information pertaining to Ex.D.107. |
| | **Ex.D.109** | RTI application. |
| | **Ex.D.110 & 110 (a)** | RTI information pertaining to Ex.D.109 with enclosures. |
| | **Ex.D.111 & b 111 (a)** | Affidavit (Original) & C.D |
| | **Ex.D.112** | Statement showing Quarry Lease Blocks of Miryan Village 2011-12. |
| | **Ex.D.113** | Current Quarry Lease Blocks Miriyan Village, Chincholi Taluk. |
| | **Ex.D.114** | Statement showing application applied for Renewal of Q.L. of Miriyan Village. |
| | **Ex.D.115** | Statement for the year 2008-09 & 2013-14 of Miriyan Village. |
| | **Ex.D.116** | List of cases filed in Miriyan Police Station. |
| | **Ex.D.117** | FIR. |
| | **Ex.D.118** | FIR. |
| | **Ex.D.119** | FIR. |
| | **Ex.D.120** | FIR. |
| | **Ex.D.121** | FIR. |
| | **Ex.D.122** | FIR. |

| | | |
|---|---|---|
| | **Ex.D.123** | FIR. |
| | **Ex.D.124** | FIR. |
| | **Ex.D.125** | FIR. |
| | **Ex.D.126** | FIR. |
| | **Ex.D.127** | FIR. |
| | **Ex.D.128** | Letter dtd: 21/11/2013 addressed by DD, Mines & Geology Dept., Gulbarga. |
| | **Ex.D.129** | Letter dtd: 25/07/2014 addressed by DD, Mines & Geology Dept., Gulbarga. |
| | **Ex.D.130** | G.O. dtd: 16/11/2005. |
| | **Ex.D.131** | CTC. |
| | **Ex.D.132** | Official Memorandum. |
| | **Ex.D.133** | Letter dtd: 13/08/2014 given by Tahasildar, Chincholi to this institution. |
| | **Ex.D.134** | CTC. |

Dated this the 8th January, 2021

8/1/21

**(K.BHAGYA)**
Additional Registrar Enquiries-14,
Karnataka Lokayukta,
Bangalore.